## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 983 |
| 2 | ಸದಸ್ಯರ ಹೆಸರು | ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 18.03.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮ ಪಂಚಾಯತಿಗಳಲ್ಲಿ ಗ್ರಾಮಠಾಣ ಪ್ರದೇಶವನ್ನು ಗುರುತಿಸಲು ಗೊತ್ತುಪಡಿಸಿದ ಅಧಿಕಾರಿ ಯಾರು; ಅವರ ನಿರ್ದಿಷ್ಟ ಜವಾಬ್ದಾರಿಗಳೇನು; | ಮರುಭೂಮಾಪನ ಕಾರ್ಯ ಕೈಗೊಂಡಾಗ ಜನವಸತಿ ಪ್ರದೇಶವನ್ನು ಗ್ರಾಮಠಾಣವಾಗಿ ಅಥವಾ ಸರ್ಕಾರದ ಅಧಿಸೂಚನೆಯಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 148 ರನ್ವಯ ಜಿಲ್ಲಾಧಿಕಾರಿಗಳು / ಭೂದಾಖಲೆಗಳ ಜಂಟಿ ನಿರ್ದೇಶಕರು ಗ್ರಾಮಠಾಣ ಗಡಿಯನ್ನು ನಿಗದಿಪಡಿಸಲು ಅಧಿಕಾರ ಉಳ್ಳವರಾಗಿರುತ್ತಾರೆ. |
| ಆ) | ಗೊತ್ತುಪಡಿಸಿದ ಅಧಿಕಾರಿಗೆ ಗ್ರಾಮೀಣ ಪ್ರದೇಶಗಳ ಆಸ್ತಿಗೆ ಇ-ಸ್ವತ್ತು ಉದ್ಧೃತ ಭಾಗ, ನಮೂನೆ-9, 11ಎ ಮತ್ತು 11ಬಿ ಪಡೆಯುವಾಗ ಗ್ರಾಮೀಣ ಜನತೆಗೆ ಆಗುತ್ತಿರುವ ಅನಾನುಕೂಲಗಳೇನು; ಗ್ರಾಮಠಾಣ ಗುರುತಿಸಲು ಸೂಕ್ತ ಪ್ರಾಧಿಕಾರ ಯಾವುದು; ಇದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸೂಕ್ತ ಪರಿಹಾರವೇನು; (ವಿವರ ನೀಡುವುದು) | ಸರ್ಕಾರದ ಸುತ್ತೋಲೆ ಸಂ.ಆರ್.ಡಿ. 430 ಎಲ್.ಜಿಪಿ 2013, ದಿನಾಂಕ:25-8-2014 ಮತ್ತು ಭೂಮಾಪನ ಇಲಾಖೆಯ ಸುತ್ತೋಲೆ ಸಂ.ಪಿಎಂಯು. ಎಂಇಜೆ. ಸಿಐಆರ್.006/2014-15 ದಿನಾಂಕ: 5-11-2014ಗಳನ್ವಯ ಯಾವುದೇ ಆಸ್ತಿಯ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಭೂಮಾಪನ ಇಲಾಖೆಗೆ ಕೋರಿಕೆ ಸಲ್ಲಿಸಿದಲ್ಲಿ, ಭೂಮಾಪನ ಇಲಾಖೆಯಿಂದ ಅಳತೆ ಮಾಡಿ ಸದರಿ ಆಸ್ತಿಯು ಗ್ರಾಮ ಠಾಣಾದ ಒಳಗಡೆ ಬರುತ್ತಿದ್ದಲ್ಲಿ ನಕ್ಷೆ ತಯಾರಿಸಿ, ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಒಂದು ವೇಳೆ ಆಸ್ತಿಯು ಗ್ರಾಮ ಠಾಣಾದ ಹೊರಗಡೆ ಬರುತ್ತಿದ್ದಲ್ಲಿ ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರಿಗೆ ಸದರಿ ಆಸ್ತಿಯು ಗ್ರಾಮಠಾಣಾದ ಹೊರಗಡೆ ಬರುತ್ತಿರುವ ಬಗ್ಗೆ ಹಿಂಬರಹದ ಮೂಲಕ ತಿಳಿಸಲಾಗುತ್ತದೆ. ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಸದರಿ ಆಸ್ತಿಯು ಸರ್ಕಾರವು ನಿಗದಿಪಡಿಸಿರುವ ಎಲ್ಲಾ ಅನುಮೋದನೆಗಳನ್ನು ಪಡೆದಿರುವ ಬಗ್ಗೆ ಪರಿಶೀಲಿಸಿ ಅಂದರೆ ಭೂಪರಿವರ್ತನೆ ಆದೇಶ ಮತ್ತು ನಗರ ಯೋಜನಾ ಇಲಾಖೆಯ ವಿನ್ಯಾಸ ನಕ್ಷೆ ಫಲಿತಾಂಶದ ಅನ್ವಯ 11ಎ ಮತ್ತು 11ಬಿ ನೀಡಲು ಕ್ರಮ ಜರುಗಿಸಲಾಗುತ್ತಿದೆ.<br>ಈವರೆಗೆ ರಾಜ್ಯದಲ್ಲಿ ಇ-ಸ್ವತ್ತು ನಕ್ಷೆ ಕೋರಿ 412830 ಅರ್ಜಿಗಳು ಸ್ವೀಕೃತವಾಗಿದ್ದು, ಪ್ರಗತಿ ವಿವರ ಈ ಕೆಳಗಿನಂತಿರುತ್ತದೆ<br>**ಇ-ಸ್ವತ್ತು ನಕ್ಷೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಪ್ರಗತಿ**<br>**(ಮಾಹೆ ನವೆಂಬರ್ 2014 ರಿಂದ ಮಾಹೆ ಫೆಬ್ರವರಿ-2020 ರವರೆಗೆ)**<br>ಒಟ್ಟು ಸ್ವೀಕೃತವಾದ ಅರ್ಜಿಗಳು: 412830<br>ವಿಲೇವಾರಿ ಮಾಡಿರುವ ಅರ್ಜಿಗಳು: 398030<br>ಬಾಕಿ ಇರುವ ಅರ್ಜಿಗಳು: 14800 |
| ಇ) | ಗ್ರಾಮ ಪಂಚಾಯತಿಗಳಲ್ಲಿ ಗ್ರಾಮಠಾಣ ವ್ಯಾಪ್ತಿ ಗುರುತಿಸಿ ಎಷ್ಟು ವರ್ಷಗಳಾಗಿವೆ; (ವಿವರ ನೀಡುವುದು) | ಗ್ರಾಮಠಾಣಾ ವ್ಯಾಪ್ತಿಯನ್ನು ಮರುಭೂಮಾಪನ ಮಾಡುವಾಗ ಜನ ವಸತಿ ಪ್ರದೇಶವನ್ನು ಗುರುತಿಸಿ ಗ್ರಾಮಠಾಣಾ ಗಡಿಗಳನ್ನು ನಿರ್ಧರಿಸಲಾಗಿರುತ್ತದೆ. ಈ ರೀತಿಯಾಗಿ ಸನ್ 1958-1966 ರ ಅವಧಿಯಲ್ಲಿ ರಿ-ಕ್ಲಾಸಿಫಿಕೇಷನ್ ಕಾರ್ಯ ನಿರ್ವಹಿಸುವಾಗ ಗ್ರಾಮಠಾಣಾ ಗಡಿಗಳನ್ನು ನಿಗದಿಪಡಿಸಲಾಗಿದೆ. |

| | | |
|---|---|---|
| ಈ) | ಗ್ರಾಮಠಾಣ ವ್ಯಾಪ್ತಿ ಗುರುತಿಸಲು ತುರ್ತಾಗಿ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು; | ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರನ್ವಯ ಮರು ಭೂಮಾಪನ ಕಾರ್ಯ ಕೈಗೊಂಡಾಗ ವಿಸ್ತರಿತ ಜನವಸತಿ ಪ್ರದೇಶದ ಗಡಿಗಳನ್ನು ಗ್ರಾಮಠಾಣ ವ್ಯಾಪ್ತಿಯೆಂದು ನಿಗಧಿಪಡಿಸುವ ಕ್ರಮವಿರುತ್ತದೆ. ಸರ್ಕಾರವು ರಾಜ್ಯದಲ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲು ತೀರ್ಮಾನಿಸಿದ್ದು, ಸರ್ವೆ ಆಫ್ ಇಂಡಿಯಾದವರ ಸಹಭಾಗಿತ್ವದಲ್ಲಿ ದ್ರೋಣ್ ಆಧಾರಿತ ಮರು ಭೂಮಾಪನ ಕೈಗೊಳ್ಳಲು ಮೊದಲ ಹಂತದಲ್ಲಿ 5 ಜಿಲ್ಲೆಗಳು ಹಾಗೂ ಎರಡನೇ ಹಂತದಲ್ಲಿ 8 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡು ಅಳತೆಗೆ ಸಿದ್ಧತಾ ಕಾರ್ಯ ಪ್ರಾರಂಭಿಸಿದೆ.<br><br>ಈ ನಡುವೆ ಕೆಲವು ಗ್ರಾಮ ಪಂಚಾಯತಿಗಳಿಂದ ಬಂದ ಕೋರಿಕೆಗಳನ್ನು ಅನುಸರಿಸಿ ಸರ್ಕಾರವು ಸುತ್ತೋಲೆ ಸಂಖ್ಯೆ: ಗ್ರಾಮಅ/441/ಗ್ರಾಪಂಅ/2016(ಭಾ-3), ದಿನಾಂಕ: 28.10.2016 ನ್ನು ಹೊರಡಿಸಿರುತ್ತದೆ. ಈ ಸುತ್ತೋಲೆಯ ಪ್ರಕಾರ ಮರು ಭೂಮಾಪನ ಪೂರ್ವದಲ್ಲಿಯೇ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ವಿಸ್ತರಿತ ಜನವಸತಿ ಪ್ರದೇಶವನ್ನು ಗ್ರಾಮಠಾಣ ವ್ಯಾಪ್ತಿಯಲ್ಲಿ ತರುವ ಬಗ್ಗೆ ಮಾರ್ಗಸೂಚಿಯನ್ನು ರೂಪಿಸಿದೆ.<br><br>ರಾಜ್ಯದಲ್ಲಿ ಸುಮಾರು 30000ಕ್ಕೂ ಅಧಿಕ ಕಂದಾಯ ಗ್ರಾಮಗಳಿದ್ದು, ಬಹುತೇಕ ಗ್ರಾಮಗಳಲ್ಲಿ ಮೂಲ ಗ್ರಾಮ ಠಾಣದಿಂದ ಹೊರಗೆ ಜನವಸತಿಗಳು ಬಂದಿರುತ್ತವೆ. ಸುತ್ತೋಲೆ ಮಾರ್ಗಸೂಚಿಯಂತೆ ಈ ಎಲ್ಲಾ ಗ್ರಾಮಗಳ ವಿಸ್ತರಿತ ವಸತಿ ಪ್ರದೇಶವನ್ನು ಅಳತೆ ಮಾಡಿ ಗ್ರಾಮಠಾಣದ ವ್ಯಾಪ್ತಿ ನಿಗಧಿಪಡಿಸಬೇಕಾಗಿರುತ್ತದೆ.<br><br>ವಿಸ್ತರಿತ ಜನವಸತಿ ಪ್ರದೇಶಗಳಲ್ಲಿ ನಿಯಮಬದ್ಧವಾಗಿ ಹಾಗೂ ನಿಯಮಬಾಹಿರವಾಗಿ ಬೆಳವಣಿಗೆ ಹೊಂದಿರುವ ಪ್ರದೇಶಗಳು ಒಳಗೊಂಡಿರುತ್ತವೆ. ಹೀಗಾಗಿ, ಈ ಕಾರ್ಯವನ್ನು ಕೈಗೊಳ್ಳುವಾಗ ಈ ಎರಡೂ ಪ್ರದೇಶಗಳನ್ನು ಪ್ರತ್ಯೇಕಿಸಿ ಅಥವಾ ಒಳಪಡಿಸಿ, ಗಡಿ ಗುರ್ತಿಸುವ ಬಗ್ಗೆ ಸಂಬಂಧಿತ ಇಲಾಖೆಗಳೊಂದಿಗೆ ವಿಸ್ತೃತ ಸಮಾಲೋಚನೆ ನಡೆಸಿ ಸೂಕ್ತ ನಿಲುವು ತೆಗೆದುಕೊಂಡು ಮುಂದಿನ ಕ್ರಮ ಜರುಗಿಸಲಾಗುವುದು. |

**ಸಂಖ್ಯೆ: ಕಂಇ 64 ಎಸ್ಎಸ್ಸಿ 2020**

(ಆರ್. ಅಶೋಕ)
ಕಂದಾಯ ಸಚಿವರು